CW : 1

PW : 1

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.406/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆ ಎ ಅಲಿ |
| ತಂದೆಯ ಹೆಸರು | : | ಅಚ್ಚು ಬ್ಯಾರಿ |
| ಪ್ರಾಯ | : | 63 ವರ್ಷ |
| ಉದ್ಯೋಗ | | ಕೃಷಿ |
| ವಾಸಸ್ಥಳ | : | ಆರ್ಲಪದವು ಪಾಣಾಜೆ ಗ್ರಾಮ. |

ದಿನಾಂಕಃ**17.12.2024**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಡಿ ಕೆ ವಕೀಲರಿಂದಃ ಪಿರ್ಯಾದಿ ಪರಃ

ನನಗೆ ಸೇರಿದ ಕೃಷಿ ಭೂಮಿ ಆರ್ಲಪದವು ಗ್ರಾಮದಿಂದ ಸ್ವಲ್ಪ ದೂರದಲ್ಲಿ ಕಂಚಿಲಕುಂಜ ಎನ್ನುವ ಜಾಗದಲ್ಲಿ ಇರುತ್ತದೆ. ದಿ.4-10-2015 ರಂದು ನಾನು ಬೆಳಗ್ಗೆ 10.00 ರಿಂದ 11.00 ಗಂಟೆಯ ಸಮಯದಲ್ಲಿ ಬೊಳ್ಳಿಂಬಲ ಕಲ್ಲಪದವು ರಸ್ತೆಯಲ್ಲಿ ನನ್ನ ತೋಟಕ್ಕೆ ಹೋಗುತ್ತಿದ್ದೆನು. ಆಗ ಆರೋಪಿತರಾದ ಯೂಸುಫ್, ಅಬ್ದುಲ್ ಅಜೀಜ್, ಮಹಮದ್ ಕಲಂದರ್, ಸಫಿಯಾ , ಅಬ್ದುಲ್ ರಜಾಕ್ರವರು ಅಲ್ಲಿ ಇದ್ದರು. ಅವರಲ್ಲಿ ಯೂಸುಫ್ ನನ್ನನ್ನು ನಾಯಿಂಡೆ ಮೊನೆ ನಿನಗೆ ಇಲ್ಲಿ ಏನು ಕೆಲಸ ಇದೆ ಎಂದು ಅವಾಚ್ಯ ಶಬ್ದಗಳಿಂದ ಬೈದನು. ನಂತರ ಯೂಸುಫ್ ಅಲ್ಲೇ ಇದ್ದ ಒಂದು ದೊಣ್ಣೆಯಿಂದ ಹೊಡೆಯಲು ಬಂದನು. ಅದರಿಂದ ನಾನು ತಪ್ಪಿಸಿಕೊಳ್ಳಲು ಹೋದಾಗ ನನ್ನ ಬಲಗೈಗೆ ದೊಣ್ಣೆಯ ಪೆಟ್ಟು ಬಿದ್ದು ಊತಗಾಯವಾಯಿತು. ಅಷ್ಟರಲ್ಲಿ ಅಬ್ದುಲ್ ಅಜೀಜ್ ರವರು ದೊಣ್ಣೆಯಿಂದ ನನ್ನ ತಲೆಯ ಮುಂಬಾಗಕ್ಕೆ ಹೊಡೆದಿದ್ದು ನಾನು ಬಿದ್ದಿರುತ್ತೇನೆ. ಆಗ ಮಹಮದ್ ಕಲಂದರ್, ಮತ್ತು ಅಬ್ದುಲ್ ರಜಾಕ್ ರವರು ನನ್ನ ಎಡಗೈ ಬೆರಳನ್ನು ತುಳಿದಿರುತ್ತಾರೆ. ಆಗ ಸಫಿಯಾರವರು ಅವನನ್ನು ಬಿಡಬೇಡಿ ಕೊಂದುಬಿಡಿ ಎಂದು ಜೀವಬೆದರಿಕೆ ಹಾಕಿರುತ್ತಾರೆ. ಆಗ ನಾನು ಬೊಬ್ಬೆ ಹೊಡೆದಿದ್ದು ಅಲ್ಲೇ ದಾರಿಯಲ್ಲಿ ಹೋಗುತ್ತಿದ್ದ ಅನ್ವರ್ ಸಾದಿಕ್ ಮತ್ತು ಇಸುಬು ಎನ್ನುವವರು ನನ್ನನ್ನು ಬಿಡಿಸಲು ಪ್ರಯತ್ನಿಸಿದರು. ಅಷ್ಟರಲ್ಲಿ ಎಲ್ಲಾ ಆರೋಪಿತರು ಸೇರಿಕೊಂಡು ನಿನ್ನನ್ನು ಇಷ್ಟರಲ್ಲೇ ಬಿಡುವುದಿಲ್ಲ , ಕೊಂದು ಬಿಡುತ್ತೇವೆ ಎಂದು ಜೀವಬೆದರಿಕೆ ಹಾಕಿರುತ್ತಾರೆ. ನಂತರ ನನ್ನನ್ನು ಅನ್ವರ್ ಸಾದಿಕ್ ಎಂಬುವರು ಪುತ್ತೂರಿನ ಚೇತನಾ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ದಾಖಲಿಸಿದ್ದು ಅಲ್ಲಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನು. ನನ್ನನ್ನು ಡಾ.ಜೆ ಸಿ

ಅಡಿಗ ಎಂಬುವರು ಉಪಚರಿಸಿದ್ದು ಅವರಿಗೆ ನಾನು ನಡೆದ ವಿಚಾರವನ್ನು ಮತ್ತು ನನಗೆ ಆದ ಗಾಯಗಳ ಬಗ್ಗೆ ತಿಳಿಸಿದ್ದೆನು. ನಂತರ ಸಂಪ್ಯ ಪೋ. ಠಾಣೆಯಿಂದ ಪೋಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಹೇಳಿಕೆಯನ್ನು ಪಡೆದು ಆರೋಪಿತರ ವಿರುದ್ಧ ದೂರು ದಾಖಲಿಸುತ್ತೇವೆ ಎಂದು ಪೋಲೀಸರು ಹೋಗಿದ್ದು ಬಳಿಕ ನನ್ನ ವಿರುದ್ದವೇ ಕೇಸನ್ನು ದಾಖಲಿಸಿರುತ್ತಾರೆ. ನನ್ನ ಮತ್ತು ಆರೋಪಿತರ ನಡುವೆ ರಸ್ತೆಗೆ ಸಂಬಂಧಿಸಿದಂತೆ ವಿವಾದವಿದ್ದು ಅದರ ಸಂಬಂಧಿತವಾಗಿ ನನ್ನ ಮೇಲೆ ಆರೋಪಿತರು ಹಲ್ಲೆ ಮಾಡಿರುತ್ತಾರೆ. ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದ ಸಂಬಂಧ ಗಾಯದ ಪ್ರಮಾಣಪತ್ರದ ಯಥಾನಕಲನ್ನು ಹಾಗೂ ಪೋಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ಬಿ ಅಂತಿಮ ವರದಿಯನ್ನು ನನ್ನ ಸಾಕ್ಷೀಕರಿಸಿದ ಹೇಳಿಕೆ ದಾಖಲಿಸುವ ಕಾಲಕ್ಕೆ ಹಾಜರುಪಡಿಸಿದ್ದೇನೆ.

ಕೃತ್ಯ ನಡೆದ ಸ್ಥಳದಲ್ಲಿ ಮಾಡಲಾದ ಮಹಜರ್ ಮತ್ತು ತಯಾರಿಸಲಾದ ಕರಡು ನಕಾಶೆಯನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲಾತಿಗಳನ್ನು ನಿಪಿ-1 ರಿಂದ 4 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಯೂಸುಫ್, ಮಹಮದ್ ಕಲಂದರ್ ಹಾಗೂ ಅಬ್ದುಲ್ ರಜಾಕ್ ರವರನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿತರು ಈ ದಿನ ನ್ಯಾಯಾಲಯಕ್ಕೆ ಗೈರುಹಾಜರಾಗಿದ್ದು ಅವರ ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಏನೂ ಇಲ್ಲ ಎಂದು ನುಡಿದಿರುತ್ತಾರೆ. ಆರೋಪಿತರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಪ್ರಾರ್ಥಿಸುತ್ತೇನೆ.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:</u>

ಆರೋಪಿ ಪರ ವಕೀಲರು ಪ್ರಸ್ತುತ ತಮ್ಮ ಪರ ಯಾವುದೇ ಪಾಟೀ ಸವಾಲು ಇಲ್ಲ, ವಿಚಾರಣೆ ಹಂತದಲ್ಲಿ ಪಾಟೀ ಸವಾಲು ಮಾಡುತ್ತೇವೆ ಎಂದು ನುಡಿದಿರುತ್ತಾರೆ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

CW : 1

PW : 1